# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1398

ಸದಸ್ಯರ ಹೆಸರು : ಡಾ: ತೇಜಸ್ವಿನಿ ಗೌಡ,(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸುವ ದಿನಾಂಕ : 24-12-2021

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಯಾವ ಯಾವ ಜಿಲ್ಲೆಗಳಲ್ಲಿ ತೋಟಗಾರಿಕಾ ಬೆಳೆಗಳನ್ನು ಬೆಳೆಯಲಾಗುತ್ತಿದೆ; ಯಾವ ಯಾವ ರೀತಿಯ ಬೆಳೆ ಉತ್ಪನ್ನಗಳ ಪ್ರಮಾಣ ಎಷ್ಟು; | ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಜಿಲ್ಲೆಗಳಾದ ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದೆ.<br>ಈ ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಬೆಳೆಗಳು ಈ ಕೆಳಕಂಡಂತಿವೆ.<br>1. ಹಣ್ಣುಗಳು<br>2. ತರಕಾರಿಗಳು<br>3. ಸಾಂಬಾರು ಬೆಳೆಗಳು<br>4. ತೋಟದ ಬೆಳೆಗಳು<br>5. ವಾಣಿಜ್ಯ ಪುಷ್ಪಗಳು<br>6. ಸುಗಂಧಿತ ಬೆಳೆಗಳು<br>7. ಔಷಧೀಯ ಬೆಳೆಗಳು<br>ಮಲೆನಾಡಿನ ಜಿಲ್ಲೆಗಳ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಹಾಗೂ ಉತ್ಪನ್ನದ ಪ್ರಮಾಣವನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ. |
| ಆ) | ಮಲೆನಾಡಿನ ಪ್ರದೇಶದಲ್ಲಿ ಎಷ್ಟು ಸಂಖ್ಯೆಯ ಹಸಿರು ಮನೆ (Green House) ಯೋಜನೆ ಜಾರಿಯಾಗಿದೆ; ಯಾವ ಯಾವ ರೀತಿ ರಿಯಾಯಿತಿ-ವಿನಾಯಿತಿ (ಸಬ್ಸಿಡಿ) ಕುರಿತು ಪೂರ್ಣ ಮಾಹಿತಿ ನೀಡುವುದು? | ಮಲೆನಾಡಿನ ಪ್ರದೇಶದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 2021-22 ನೇ ಸಾಲಿನಲ್ಲಿ ಹಸಿರು ಮನೆ (Green House) ಘಟಕಕ್ಕೆ ನಿಗಧಿಯಾಗಿರುವ ಗುರಿಗಳು ಈ ಕೆಳಕಂಡಂತಿರುತ್ತವೆ. |

(ಭೌತಿಕ ಹೆ/ಆರ್ಥಿಕ ರೂ ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಗಳು | ಭೌತಿಕ | ಆರ್ಥಿಕ |
|---|---|---|---|
| 1 | ಉತ್ತರ ಕನ್ನಡ | 1.2 | 50.4 |
| 2 | ಶಿವಮೊಗ್ಗ | 0 | 0 |
| 3 | ಉಡುಪಿ | 0 | 0 |
| 4 | ಚಿಕ್ಕಮಗಳೂರು | 1.4 | 58.8 |
| 5 | ದಕ್ಷಿಣ ಕನ್ನಡ | 0.2 | 8.4 |
| 6 | ಹಾಸನ | 1.4 | 58.8 |
| 7 | ಕೊಡಗು | 0.4 | 16.80 |
| ಒಟ್ಟು | | **4.6** | **193.2** |

ಪ್ರಸಕ್ತ ಸಾಲಿನಲ್ಲಿ ಪ್ರತಿ ಫಲಾನುಭವಿಗೆ ಘಟಕ ವೆಚ್ಚ ರೂ.789.00 ರಿಂದ ರೂ.817/ ಚದರ ಮೀಟರ್ ರಂತೆ ಸಾಮಾನ್ಯ ವರ್ಗದ ರೈತರಿಗೆ ಶೇ. 50 ರಂತೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಂತೆ ಸಹಾಯಧನ ನೀಡಲು ಹಾಗೂ ಪ್ರತಿ ಫಲಾನುಭವಿಗೆ ಗರಿಷ್ಠ 4000 ಚ.ಮೀ ಹಸಿರುಮನೆ ನಿರ್ಮಿಸಿಕೊಳ್ಳಲು ಅವಕಾಶವಿರುತ್ತದೆ.

| | | |
|---|---|---|
| ಇ) | ಮಹಿಳಾ ಕೃಷಿಕರಿಗೆ ವಿಶೇಷವಾದ ಸಬ್ಸಿಡಿ ಯೋಜನೆ ಇದೆಯೇ; ಎಷ್ಟು ಮಂದಿ ಬಳಸಿಕೊಂಡಿದ್ದಾರೆ; ಇದರಿಂದ ಮಹಿಳಾ ಕೃಷಿಕರ ಆರ್ಥಿಕ ಸ್ವಾವಲಂಬನೆ ಆಗಿದೆಯೇ: | ಮಹಿಳಾ ಕೃಷಿಕರಿಗೆ ವಿಶೇಷವಾದ ಸಬ್ಸಿಡಿ ಯೋಜನೆ ಇರುವುದಿಲ್ಲ. ಪ್ರಸ್ತುತ ಇರುವ ಇಲಾಖಾ ಯೋಜನೆಗಳಲ್ಲಿ ಶೇ.33ರಷ್ಟು ಅನುದಾನವನ್ನು ಮಹಿಳಾ ಫಲಾನುಭವಿಗಳಿಗೆ ಮೀಸಲಿಡಲಾಗುತ್ತಿದೆ.<br>ಸಹ್ಯಾದ್ರಿ ಮಡಿಲಲ್ಲಿರುವ ಮಲೆನಾಡಿನ ಜಿಲ್ಲೆಗಳಲ್ಲಿ 2021-22ನೇ ಸಾಲಿನಲ್ಲಿ **2799** ಸಂಖ್ಯೆಯ ಮಹಿಳಾ ಫಲಾನುಭವಿಗಳು ಇಲಾಖಾ ಯೋಜನೆಗಳನ್ನು ಬಳಸಿಕೊಳ್ಳಲಾಗಿದೆ, ಮಹಿಳಾ ಕೃಷಿಕರ ಸ್ವಾವಲಂಬನೆ ಆಗಿರುತ್ತದೆ. |